‘ಉಚ್ಚೆಯ ಕುಡಿದರೂ ತನ್ನಿಚ್ಚೆಯಂತಿರಬೇಕು’ ಎಂದು ಸ್ವಾಭಿಮಾನದ ಹಿರಿಮೆ ಸಾರುವ ಸರ್ವಜ್ಞ ಕವಿಗೆ ಮೂತ್ರಪಾನದಲ್ಲಿ ತಪ್ಪೇನೂ ಕಂಡಿಲ್ಲ. ಇನ್ನು, ಸ್ವಮೂತ್ರಪಾನದಿಂದ ಆಯುಷ್ಯವೃದ್ಧಿ ಎಂಬುದಕ್ಕೆ ಮುರಾರ್ಜಿ ದೇಸಾಯಿಯಂಥವರ ಹೇರಳ ಉದಾಹರಣೆಗಳಿವೆ. ನಾವು ಹುಡುಗರಾಗಿದ್ದಾಗ, ಆಟದಲ್ಲಿ ಬಿದ್ದು ಮೈ ಕೈ ತರಚಿಕೊಂಡರೆ ಸ್ವಮೂತ್ರ ಲೇಪನವೇ ಇನ್‌ಸ್ಟಂಟ್ ಮೆಡಿಸಿನ್ ನಮಗೆಲ್ಲ.

ಮೂತ್ರದ ಸುತ್ತ ಸುತ್ತಿಕೊಂಡಿರುವ ಲೋಕಾನುಭವದ ಮಾತುಗಳನ್ನು, ಅನುಭವಾಮೃತಗಳನ್ನೂ ನಮ್ಮ ಜನ ಮಾತುಮಾತಿಗೆ ಸಹಜವೆನ್ನುವಂತೆ ಬಳಸುತ್ತಾರೆ. ಇಬ್ಬರ ನಡುವಿನ ಸಂಬಂಧಗಳು ಬಿಗಡಾಯಿಸಿದರೆ, ‘ನಿನ್ನ ಮನೀ ಕಡೆ ಮುಖಮಾಡಿ ನಾ ಉಚ್ಚಿಸೈತ ಹೊಯ್ಯಾಂಗಿಲ್ಲ ಹೋಗ್ಲೇ’ ಎಂದು ಒಬ್ಬ ಘೋಷಿಸಿದರೆ, ‘ಹೋಗ್ಲೋಗೊ ನನಗ ಗೊತ್ತಿಲ್ಲೇನು, ನಿಮ್ಮ ವಂಶ ಎಂಥಾದ್ದು ಗೊತ್ತಿಲ್ಲೇನು ನಮಗ. ಹಾದಿಬೀದ್ಯಾಗ ನಿಂತ ಉಚ್ಚಿ ಹೊಯ್ಯೊ ಹೇತ್ಲಂಡ್ಯಾಗೊಳು ನೀವು.’ ಎಂದು ಇನ್ನೊಬ್ಬಾತನ ಜಾತಕ ಜಾಲಾಡಿತ್ತಾನೆ. ಸಮಾಜದಲ್ಲಿ ಮರ್ಯಾದೆ ಕಳಕೊಂಡ ಮತ್ತೊಬ್ಬನ ಮಾನ ಹರಾಜು ಹಾಕುವ ರೀತಿ ಕೇಳಿ.

‘ಏ!... ಈಗ ಅವನ ಕೈಮ್ಯಾಲ ಯಾರೂ ಉಚ್ಚಿ ಸೈತ ಹೊಯ್ಯಾಂಗಿಲ್ಲ’ ಎಂದು ಮಾನಮಾಪನ ಮಾಡುತ್ತಾರೆ. ಭೋಳೆ ಸ್ವಭಾವದ ವ್ಯಕ್ತಿಯ ಘನತೆ ಬಣ್ಣಿಸುವಲ್ಲಿಯೊ, ‘ನೋಡಿದ್ರೇನ್ರೊ, ಆ ಶರಣಪ್ಪನ ಸ್ವಭಾವ, ಅಸಲ ಬಂಗಾರದಂಥಾದ್ದು. ಮುಂಜಾನೆದ್ದು ಅವನ ಉಚ್ಚಿನಾದ್ರೂ ದಾಟ್ರಿ, ಸುಧಾರ್ಸಬಹುದೇನೊ ನೀವೂ’. ಹೀಗ್ಹೀಗೆ ಉಚ್ಚೆಯನ್ನು ಮುಂದೆಮಾಡಿ ವ್ಯಕ್ತಿತ್ವದ ಹೈಗ್ರೇಡೊ ಇಲ್ಲ ಡಿಗ್ರೇಡೊ ನಡೆಯುತ್ತಿರುತ್ತದೆ.

★★★

